**ದಿನಾಂಕಃ 13.11.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಾದ ಶ್ರೀಮತಿ.HPD ರವರಿಂದಃ**

1) ಯಾವ ಅಪಘಾತದಲ್ಲಿ ನನ್ನ ಗಂಡನು ಮರಣ ಹೊಂದಿದ್ದಾರೋ, ಆ ಅಪಘಾತವನ್ನು ನಾನು ನೋಡಿರುವುದಿಲ್ಲ. ಅಪಘಾತವು ಆದ ಸಮಯದಲ್ಲಿ ನನ್ನ ಗಂಡನು ತಮ್ಮ ದ್ವಿಚಕ್ರ ವಾಹನವನ್ನು ಚಾಲನೆ ಮಾಡಿಕೊಂಡು ಎಂ.ಆರ್.ಪಿ ಬಾರ್ ಇರುವ ರಸ್ತೆಯಲ್ಲಿ ಬರುತ್ತಿದ್ದರು ಎಂದರೆ ಸರಿ.

2) ನನ್ನ ಗಂಡನು ಎಂ.ಆರ್.ಪಿ ಬಾರ್ ನಲ್ಲಿ ಮದ್ಯಪಾನ ಮಾಡಿದರು ಮತ್ತು ನಂತರ ತಮ್ಮ ದ್ವಿಚಕ್ರ ವಾಹನವನ್ನು ಚಾಲನೆ ಮಾಡಿಕೊಂಡು ಬರುತ್ತಿದ್ದರು ಎಂದರೆ ಸುಳ್ಳು.

3) ನನ್ನ ಗಂಡನು ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನದ ಸಂಖ್ಯೆ ಕೆಎ-**09**-ಹೆಚ್ ಆರ್-**1982** ಆಗಿದೆ ಎಂದರೆ ಸರಿ. ಸದರಿ ವಾಹನಕ್ಕೆ ವಿಮಾ ಪಾಲಿಸಿಯು ಇತ್ತು. ಸದರಿ ವಿಮಾ ಪಾಲಿಸಿಯನ್ನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ನನ್ನ ಗಂಡನು ಚಾಲನೆ ಮಾಡುತ್ತಿದ್ದ ವಾಹನಕ್ಕೆ ವಿಮಾ ಪಾಲಿಸಿಯು ಇರಲಿಲ್ಲ ಮತ್ತು ಆ ಕಾರಣದಿಂದಲೇ ನಾವು ವಿಮಾ ಕಂಪೆನಿಯನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಈ

ಪ್ರಶ್ನೆಗೆ ಈ ಸಾಕ್ಷಿದಾರರು ಮೌನವಾಗಿ ನಿಂತಿದ್ದಾರೆ.

4) ಅಪಘಾತವು ಆದ ನಂತರ ಒಂದು ದಿನ ತಡವಾಗಿ ಪೋಲಿಸರಿಗೆ ದೂರನ್ನು ನೀಡಲಾಗಿದೆ ಎಂದರೆ ಸರಿ. ಯಾವ ಕಾರಣದಿಂದ ತಡವಾಗಿ ಪೋಲಿಸರಿಗೆ ದೂರನ್ನು ನೀಡಲಾಗಿದೆ ಎಂದರೆ "ನನ್ನ ಗಂಡನು ಮನೆಗೆ ಬಂದು ಏನು ಆಗಿಲ್ಲ, ಚೆನ್ನಾಗಿದ್ದೇನೆ ಎಂದು ಹೇಳಿದರು, ಆದ ಕಾರಣದಿಂದ ತಕ್ಷಣವೇ ಪೋಲಿಸರಿಗೆ ದೂರನ್ನು ನೀಡಲಿಲ್ಲ".

5) ನನ್ನ ಗಂಡನು ವಿಪರೀತ ಮದ್ಯಪಾನ ಮಾಡಿದ್ದರು ಮತ್ತು ಆ ಕಾರಣದಿಂದಲೇ ಅಪಘಾತವು ಆಗಿದೆ ಮತ್ತು ಆ ಕಾರಣದಿಂದಲೇ ಪೋಲಿಸರಿಗೆ ದೂರನ್ನು ಒಂದು ದಿನ ತಡವಾಗಿ ನೀಡಲಾಗಿದೆ ಎಂದರೆ ಸುಳ್ಳು.

6) ಎಂ.ಆರ್.ಪಿ. ಬಾರ್ ಬಳಿ ನನ್ನ ಗಂಡನು ಮದ್ಯಪಾನ ಮಾಡಿ ಬಿದ್ದಿದ್ದರು ಮತ್ತು ನನ್ನ ಗಂಡನ ಪರಿಚಯಸ್ತರು ನನ್ನ ಗಂಡನನ್ನು ಮನೆಗೆ ಕರೆತಂದು ಬಿಟ್ಟರು ಎಂದರೆ ನನ್ನ ಗಂಡನು ಕೆಲಸ ಮುಗಿಸಿಕೊಂಡು ಮನೆಗೆ ಬರುತ್ತಿದ್ದರು ಮತ್ತು ಆಗ ಅಪಘಾತವು ಆಗಿದೆ ಮತ್ತು ಅಪಘಾತವನ್ನು ನೋಡಿದವರು ನನ್ನ ಗಂಡನನ್ನು ಮನೆಗೆ ಕರೆತಂದಿದ್ದಾರೆ.

7) ಅಪಘಾತದ ಸಂಬಂಧವಾಗಿ ಪೋಲಿಸರಿಗೆ ಫಿರ್ಯಾದನ್ನು ನೀಡಿರುವ

ರಾಜಶೇಖರ ರವರು ನನ್ನ ಗಂಡನ ತಮ್ಮ ಆಗಿದ್ದಾರೆ. ಅಪಘಾತದ ಸಂಬಂಧವಾಗಿ ಪೋಲಿಸರು ಹಾಕಿದ್ದ ಕ್ರಿಮಿನಲ್ ಪ್ರಕರಣವು ವಜಾ ಆಗಿದೆ ಮತ್ತು ಆ ಪ್ರಕರಣದ ಆರೋಪಿಯನ್ನು ದೋಷಮುಕ್ತನನ್ನಾಗಿ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

8) ಪೋಲಿಸರು ಮಾಡಿರುವಂತಹ ಸ್ಥಳ ಪಂಚನಾಮೆಗೆ ಸಹಿ ಹಾಕಿರುವ ವ್ಯಕ್ತಿಗಳು ನಮ್ಮ ಸಂಬಂಧಿಗಳು ಆಗಿದ್ದಾರೆ ಎಂದರೆ ಸುಳ್ಳು.

9) ನನ್ನ ಗಂಡನು ಜೆ.ಸಿ.ಬಿ ವಾಹನದ ಚಾಲಕನಾಗಿದ್ದರು ಎನ್ನುವ ಸಂಬಂಧ ಚಾಲನಾ ಪರವಾನಗಿಯನ್ನು ಹಾಜರುಪಡಿಸಿದ್ದೇನೆ.

10) ನನ್ನ ಗಂಡನಿಗೆ ಒಂದು ತಿಂಗಳಿಗೆ **30,000-00** ರೂಪಾಯಿ ಸಂಬಳ ಬರುತ್ತಿತ್ತು ಎನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ಗಂಡನು ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ ಮತ್ತು ಅಪಘಾತವೂ ಸಹಾ ಆಗಿರುವುದಿಲ್ಲ ಮತ್ತು ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**<u>ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಿಂದಃ</u>**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ ಮತ್ತು ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.